ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 146/2023
ಡಿ.ಡಬ್ಲ್ಯೂ : 1

ದಿನಾಂಕಃ 06-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಎ.ಸಿ.ಎಚ್. ವಕೀಲರಿಂದಃ

1. ಈ ಪ್ರಕರಣದಲ್ಲಿ ವಾದಿಯವರು ಹಾಜರು ಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಿ.ಪಿ. 1 ರಂತೆ 51/9 ಚಂದ್ರಶೇಖರ ಶೆಟ್ಟಿಯವರ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಜಾಗವನ್ನು 1975 ರಲ್ಲಿ ಖರೀದಿ ಮಾಡಿರುತ್ತಾರೆ. ದಿನಾಂಕ 28-02-2000 ರಲ್ಲಿ ಖಾತೆ ಆಗಿರುತ್ತದೆ. ನನ್ನ ತಂದೆ ಹೆಸರಿಗೆ ಖಾತೆ ಆಗಿರುತ್ತದೆ. ನನ್ನ ಹೆಸರಿಗೆ ದಿನಾಂಕ 30-05-2000 ರಲ್ಲಿ ನನ್ನ ಹೆಸರಿಗೆ ಖಾತಾ ಬದಲಾವಣೆ ಆಗಿರುತ್ತದೆ.

2. ನನ್ನ ಹೆಸರಿಗೆ ಆದ ಖಾತಾ ಬದಲಾವಣೆಯ ಮ್ಯುಟೇಶನ್ ರಿಜಿಸ್ಟರ್ ಆದೇಶವನ್ನು ನಾನು ನೋಡಿರುವುದಿಲ್ಲ. ನನ್ನ ತಂದೆಗೆ ಖಾತಾ ಬದಲಾವಣೆ ಆಗಿರುವುದು ದಿನಾಂಕ 14-01-2000 ಎಂದರೆ ಸರಿಯಲ್ಲ. ಸಾಕ್ಷಿ ನಾನು RTC ತೆಗೆದು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ದಿನಾಂಕ 25-04-2000 ಕ್ಕೆ ಖಾತಾ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ದಿನಾಂಕ 30-05-2000 ರಲ್ಲಿ ನನ್ನ ಹೆಸರಿಗೆ ಖಾತಾ ಬದಲಾವಣೆ ಆಗಿದ್ದು RTC ಇರುತ್ತದೆ ಎಂದು ನುಡಿಯುತ್ತಾರೆ. 1975 ರಲ್ಲಿ ಆದ ಕ್ರಯದ ಪ್ರಕಾರ 2000 ಇಸವಿಯವರೆಗೆ ಯಾಕೆ ಖಾತಾ ಬದಲಾವಣೆ ಆಗಿರುವುದಿಲ್ಲ ಎಂದರೆ ಸಾಕ್ಷಿ ಅವರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಂದಾಯ ಇಲಾಖೆಯವರನ್ನು ಹಿಡಿದುಕೊಂಡು 2000 ನೇ ಇಸವಿಯಲ್ಲಿ 2 ತಿಂಗಳ ಅಂತರದಲ್ಲಿ ನನ್ನ ತಂದೆ ಹೆಸರಿಗೆ ಹಾಗೂ ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ವಾದಿಯವರ ತಂದೆಯ ಜಮೀನನ್ನು ಮೋಸದಿಂದ ಕಂದಾಯ ಇಲಾಖೆಯವರೊಂದಿಗೆ ಸೇರಿಕೊಂಡು ನನ್ನ ತಂದೆ ಹೆಸರಿಗೆ ಹಾಗೂ ನನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖಾತಾ ಬದಲಾವಣೆ ಮಾಡಿಕೊಂಡ ಜಮೀನು ಈಗ ವಾದಿಯವರ ಗಂಡನ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ವಾದಿ ಈ

ಬಗ್ಗೆ ಪ್ರಶ್ನಿಸಿದ್ದಕ್ಕೆ  ನಾನು ವಿನಾಃ ಕಾರಣ ಅವರ ವಿರುದ್ಧ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ನಮ್ಮ ಅಡಿಕೆ ಗಿಡ, ಬದನೆ ಗಿಡ ಕಟಾವು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯವರ ಜಮೀನಿನಲ್ಲಿ ಅನುಧಿಕೃತವಾಗಿ ಪ್ರವೇಶ ಮಾಡಿ, ಕೃತ ಮಾಡಲು ಹೋಗಿದ್ದರಿಂದ ಅವರು ತಡೆದಿರುತ್ತಾರೆ ಎಂದರೆ ಸರಿಯಲ್ಲ. ಸಸಾಕ್ಷಿ ನಾನೇ 1975 ರಿಂದ ಸ್ವಾಧೀನದಲ್ಲಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯವರ ತಂದೆಯ ಹೆಸರಿಗೆ ಇರುವ ಜಮೀನನ್ನು ವಾದಿಯ ಹೆಸರಿಗೆ ಮಾಡಿಕೊಳ್ಳಲು ನಮ್ಮದು ಯಾವುದೇ ತಕರಾರು ಇರುವುದಿಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ